**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಕುಮಟಾ</u>**

**ಸಿ.ಸಿ.ನಂ.1133/2024**

ಸಿ.ಡಬ್ಲ್ಯು 12

ಪಿ.ಡಬ್ಲ್ಯು 05

ಸಾಕ್ಷಿದಾರರ ಹೆಸರು – **ರವಿ ನಾಗಪ್ಪಾ ಗುಡ್ಡಿ**

ತಂದೆಯ ಹೆಸರು – ನಾಗಪ್ಪಾ ಗುಡ್ಡಿ

ವಯಸ್ಸು – 35 ವರ್ಷ

ಉದ್ಯೋಗ – ಪೊಲೀಸ್ ಉಪ ನಿರೀಕ್ಷಕರು, ಕುಮಟಾ ಠಾಣೆ

ವಾಸ್ತವ್ಯ – ಕುಮಟಾ

(ಇಂದು ದಿನಾಂಕಃ 16–**04–2026** ರಂದು ಸತ್ಯ–ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ದಿಃ 26/01/2024 ರಿಂದ ಇಲ್ಲೀಯವರೆಗೆ ಕುಮಟಾ ಪೊಲೀಸ ಠಾಣೆಯಲ್ಲಿ ಪೊಲೀಸ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10–05–2024 ರಂದು ಕುಮಟಾ ಪೊಲೀಸ ಠಾಣೆಯಲ್ಲಿ ಠಾಣಾ ಕರ್ತವ್ಯದಲ್ಲಿದ್ದಾಗ ಚಾ.ಸಾ.1 ರವರು ನೀಡಿದ ಹೇಳಿಕೆ ದೂರನ್ನು ಚಾಸಾ 9 ರವರಿಂದ ಬರೆಯಿಸಿ ಅವರಿಗೆ ತರ್ಜುಮೆ ಮಾಡಿ ಓದಿ ಹೇಳಿ ನಂತರ ಅದನ್ನು 10–30 ಗಂಟೆಗೆ ಪಡೆದುಕೊಂಡು ಠಾಣೆಗೆ ಬಂದು ಠಾಣಾ ಗುನ್ನಾ ಸಂಖ್ಯೆ 98/2024 ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು,

ಪ್ರಥಮ ವರ್ತಮಾನ ವರದಿಯನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು **ದೂರನ್ನು** ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.10 ಎಂದು** ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ10ಎ ಎಂದು** ಗುರುತಿಸಲಾಯಿತು. ಸಾಕ್ಷಿಯು **ಪ್ರಥಮ ವರ್ತಮಾನ ವರದಿ**ಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು **ನಿ.ಪಿ.11 ಎಂದು**, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.11(ಎ) ಎಂದು** ಗುರುತಿಸಲಾಯಿತು.

ಅದೇ ದಿನ ತನಿಖೆಯನ್ನು ಮುಂದುವರಿಸಿ ಘಟ ಸ್ಥಳಕ್ಕೆ ತೆರಳಿ ಚಾಸಾ 1 ರವರು ತೋರಿಸಿದಂತೆ ಚಾಸಾ 2 ಹಾಗೂ 3 ರವರ ಸಮಕ್ಷಮದಲ್ಲಿ 16-00 ಗಂಟೆಯಿಂದ 17-00 ಗಂಟೆಯವರಗೆ ನಿಪಿ 1 ಹಾಗೂ 2 ನ್ನು ತಯಾರಿಸಿ ನಿಪಿ 3 ರಿಂದ 5 ರಂತೆ ಭಾವಚಿತ್ರವನ್ನು ತೆಗೆದಿರುತ್ತೇವೆ. ನಿಪಿ 1 ರಸಾಕ್ಷಿಯ ಸಹಿಯನ್ನು ನಿಪಿ1ಸಿ ಎಂದು, ನಿಪಿ 2 ರ ಸಾಕ್ಷಿಯ ಸಹಿಯನ್ನು **ನಿಪಿ2ಸಿ** ಎಂದು ಗುರುತಿಸಲಾಯಿತು. ನಿಪಿ 3 ರಿಂದ 5 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಅಪಘಾತಕ್ಕೆ ಒಳಗಾದ ಲಾರಿ ಸಂಖ್ಯೆ ಎಚ್ ಆರ್ 74 ಬಿ 8339 ಲಾರಿಯನ್ನು ವಶಪಡಿಸಿಕೊಂಡಿರುತ್ತೇವೆ,

ಅದೇ ದಿನ ಠಾಣೆಗೆ ಬಂದು ಚಾಸಾ 2 ಹಾಗೂ 3 ರವರ ಸಮಕ್ಷಮದಲ್ಲಿ ಚಾಸ 1 ರವರು ಮಾಹಿತಿಯನ್ನು ನೀಡಿದಂತೆ ಅಪಘಾತ ಪಡಿಸಿದ ಬಸ್ ಸಂಖೆ ಕೆಎ 31 ಎಫ್ 1888 ನ್ನು 17-45 ಗಂಟೆಯಿಂದ 18-45 ಗಂಟೆಯವರೆಗೆ ನಿಪಿ 6 ರಂತೆ ಪಂಚನಾಮೆಯನ್ನು ಮಾಡಿ ನಿಪಿ 7 ಹಾಗೂ 8 ರಂತೆ ಭಾವಚಿತ್ರವನ್ನು ತೆಗೆದಿರುತ್ತೇವೆ. ನಿಪಿ 6 ರ ಸಾಕ್ಷಿಯ ಸಹಿಯನ್ನು ನಿಪಿ6ಸಿ ಎಂದು ಗುರುತಿಸಲಾಯಿತು. ನಿಪಿ 7 ಹಾಗೂ 8 ರಲ್ಲಿ ಇರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಚರಾಸಾ4 ರಿಂದ 6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 13/05/2024 ರಂದು ಚಾಸಾ 10 ರವರು ನೀಡಿದ ಎಮ್.ವಿ.ಆಯ್ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಸದ್ರಿ ದಾಖಲಾತಿಯನ್ನು **ನಿಪಿ12** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು **ನಿಪಿ12ಎ** ಎಂದು ಗುರುತಿಸಲಾಯಿತು.

ತನಿಖೆಯನ್ನು ಮುಂದುವರಿಸಿ ಚಾಸಾ 8 ರವರಿಗೆ ಕಲಂ 133 ನೋಟೀಸನ್ನು ನೀಡಿ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸೂಕ್ತ ಜಾಮೀನಿನ ಮೇಲೆ ಅಪಘಾತ ಪಡಿಸಿದ ವಾಹನವನ್ನು ಕರಾರು ಬಾಂಡ ಮುಖಾಂತರ ಬಿಟ್ಟಿರುತ್ತೇನೆ.

ಸಾಕ್ಷಿಗೆ ಮೂರು ದಾಖಲಾತಿಗಳನ್ನು ತೋರಿಸಲಾಗಿ, ಸಾಕ್ಷಿಯು ಸದ್ರಿ ದಾಖಲಾತಿಗಳ್ನು ನೋಡಿ ಗುರುತಿಸಿದ್ದು, ಅವುಗಳು ಕ್ರಮವಾಗಿ ಕಲಂ 133 ಮೋಟಾರ ವಾಹನ ಕಾಯ್ದೆ ನೋಟಿಸ, ಸದ್ರಿ ನೋಟಿಸನ ಉತ್ತರ ಹಾಗೂ ಇಂಡಿಮ್ನಿಟಿ ಬಾಂಡ ಆಗಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.13, ನಿ.ಪಿ.14 ಹಾಗೂ ನಿ.ಪಿ.15ಎಂದು ಗುರುತಿಸಲಾಗಿ, ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿ.ಪಿ.13ಎ, ನಿ.ಪಿ.14ಎ ಹಾಗೂ ನಿ.ಪಿ.15ಎ ಎಂದು ಗುರುತಿಸಲಾಯಿತು.

ದಿನಾಂಕಃ 13/05/2024 ರಂದು ಚಾಸಾ 6 ರವರಿಗೆ ಕಲಂ 133 ನೋಟೀಸನ್ನು ನೀಡಿ ಉತ್ತರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸೂಕ್ತ ಜಾಮೀನಿನ ಮೇಲೆ ಅಪಘಾತಕ್ಕೆ ಒಳಗಾದ ವಾಹನವನ್ನು ಕರಾರು ಬಾಂಡ ಮುಖಾಂತರ ಬಿಟ್ಟಿರುತ್ತೇನೆ.

ಸಾಕ್ಷಿಗೆ ಮೂರು ದಾಖಲಾತಿಗಳನ್ನು ತೋರಿಸಲಾಗಿ, ಸಾಕ್ಷಿಯು ಸದ್ರಿ ದಾಖಲಾತಿಗಳ್ನು ನೋಡಿ ಗುರುತಿಸಿದ್ದು, ಅವುಗಳು ಕ್ರಮವಾಗಿ ಕಲಂ 133 ಮೋಟಾರ ವಾಹನ ಕಾಯ್ದೆ ನೋಟಿಸ, ಸದ್ರಿ ನೋಟಿಸನ ಉತ್ತರ ಹಾಗೂ ಇಂಡಿಮ್ನಿಟಿ ಬಾಂಡ ಆಗಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.16,

ನಿ.ಪಿ.17 ಹಾಗೂ ನಿ.ಪಿ.18ಎಂದು ಗುರುತಿಸಲಾಗಿ, ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿ.ಪಿ.16ಎ, ನಿ.ಪಿ.17ಎ ಹಾಗೂ ನಿ.ಪಿ.18ಎ ಎಂದು ಗುರುತಿಸಲಾಯಿತು.

ಅದೇ ದಿನ ಆರೋಪಿತನು ಠಾಣೆಗೆ ಹಾಜರಾಗಿದ್ದು ಆತನಿಗೆ ದಸ್ತಗಿರಿ ನಿಯಮಗಳನ್ನು ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕಃ 13/05/2024 ರಂದು ಆರೋಪಿತನು ಅಪಘಾತಪಡಿಸಿದ ವಾಹನದಲ್ಲಿ ಅಪಘಾತದ ದಿನಾಂಕದಂದು ಕರ್ತವ್ಯದಲ್ಲಿ ಇದ್ದ ಬಗ್ಗೆ ಕರ್ತವ್ಯ ಧೃಡೀಕರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು ನಿಪಿ 19 ಎಂದು ಸಾಕ್ಷಿಯ ಸಹಿಯನ್ನು ನಿಪಿ19ಎ ಎಂದು ಗುರುತಿಸಲಾಯಿತು.

ದಿನಾಂಕಃ 02/06/2024 ರಂದು ಚಾಸಾ 9 ರವರಿಂದ ಈ ಪರಕರಣದ ಭಾವಚಿತ್ರಗಳಿಗೆ ಸಂಬಂಧಿಸಿದಂತೆ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು ನಿಪಿ20 ಎಂದು ಸಾಕ್ಷಿಯ ಸಹಿಯನ್ನು ನಿಪಿ20ಎ ಎಂದು ಗುರುತಿಸಲಾಯಿತು. ಅದೇ ದಿನ ಈ ಕುರಿಸಾಗಿ ಚಾಸಾ 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಈ ಪ್ರಕರಣದ ಗಾಯಾಳುವಿಗೆ ಸಂಭಂಧಿಸಿದಂತೆ ಚಾಸಾ 11 ರವರಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದ್ರಿ ದಾಖಲಾತಿಯನ್ನು ನಿಪಿ 21 ಎಬಂದು, ಸಾಕ್ಷಿಯ ಸಹಿಯನ್ನು ನಿಪಿ21 ಎ ಎಂದು ಗುರುತಿಸಲಾಯಿತು.

ತನಿಖೆಯಲ್ಲಿ ಆರೋಪಿತರ ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಾಗುವುದರಿಂದ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು –ಆರೋಪಿತರ ಪರ ಶ್ರೀ. ಬಿ ಡಿ ಎಸ್ ವಕೀಲರಿಂದ**

ಚಾಸಾ 9 ರವರು ನಿಪಿ 10 ನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿರುತ್ತಾರೆ. ಅವರ ಇಲಾಖಾ ಸಂಖ್ಯೆ 1743 ಆಗಿರುತ್ತದೆ. ನಿಪಿ10 ರಲ್ಲಿ 10–43 ಎಂದು ನಮೂದು ಇದೆ ಎಂದರೆ ಸರಿಯಲ್ಲ. ನನಗೆ ಅಂಕಿ ಸಂಖ್ಯೆಗಳ ಜ್ಞಾನ ಇದೆ. ದೂರು ದಾಖಲಿಸಿಕೊಂಡ ಸಿಬ್ಬಂದಿಗೆ ಹಿಂದಿ ಭಾಷಯ ಜ್ಞಾನ ಇದೆ ಎಂಬ ಬಗ್ಗೆ ಯಾವುದೇ ದಾಖಲಾತಿಯನ್ನು ಪಡೆದುಕೊಂಡು ಹಾಜರುಪಡಿಸಿರುವುದಿಲ್ಲ. ಈ ದೂರನ್ನು ದಾಖಲಿಸಿಕೊಳ್ಳಲು ಒಂದು ದಿನದ ಒಳಂಬ ಇದ್ದು ಈ ಕುರಿತಾಗಿ ಯಾವುದೇ ವಿವರಣೆ ನಿಪಿ10 ರಲ್ಲಿ ನಮೂದು ಇರುವುದಿಲ್ಲ. ಅಪಘಾತಕ್ಕೆ ಒಳಗಾದ ವಾಹನವನ್ನು ಯಾವ ಭಾಗದಲ್ಲಿ ನಿಖರವಾಗಿ ಜಖಂಗೊಂಡಿರುತ್ತದೆ ಎಂಬ ಬಗ್ಗೆ ಪಂಚನಾಮೆಯಲ್ಲಿ ನಮೂದು ಇರುತ್ತದೆ. ಸದ್ರಿ ಜಖಂಗಳು ಲಾರಿಯ ಬಲ ಬದಿಯ ಬಾಡಿ ಹಾಗೂ ಡಿಸೆಲ್ ಟ್ಯಾಂಕ ಹಾಗೂ ಅದರ ಗಾರ್ಡ್‌ಗೆ ಜಖಂಗೊಂಡಿರುತ್ತದೆ.

ನಿಪಿ3 ರಿಂದ 5 ರಲ್ಲಿ ಮುಂಭಾಗದಲ್ಲಿ ವಾಹನವನ್ನು ಜಖಂಗೊಂಡಿರುವುದು ಕಂಡು ಬರುವುದಿಲ್ಲ ಎಂದರೆ ಸರಿ. ಲಾರಿಯಲ್ಲಿ ಇದ್ದಂತಹ ವ್ಯಕ್ತಿಗಳಿಗೆ ಗಾಯ ಆಗಿರುತ್ತದೆ. ಅವರ ಮೇಲೆ ಪ್ರಕರಣ ದಾಖಲಾದ ಸಂದರ್ಭದಲ್ಲಿ ಅವರಿಗೆ ಪರಿಹಾರ ಸಿಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಆಗಿದೆ ಎಂಬ ಪ್ರದೇಶ ವು ಸಂಪೂರ್ಣ ಹಾಳಾದ ವಬಗ್ಗೆ ನಿಪಿ 3 ರಿಂದ 5 ರವರೆಗೆ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಗೆ ವೇಗ ನೀಯಂತ್ರಕಗಳನ್ನು ಅಳವಡಿಸಿರುತ್ತಾರೆ ಎಂದರೆ ಸರಿ. ಗಾಯಾಳುಳಿಗೆ ಅನುಕೂಲಕರವಾಗಲಿ ಎಂಬ ದೃಷ್ಟಿಯಿಂದ ಅವಬರಿಗೆ

ಪೂರಕವಾಗಲಿ ಎಂಬ ದೃಷ್ಟಿಯಿಂದ ದೂರಬನ್ನು ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ರಿಂದ 5 ದಾಖಲಾತಿಗಳನ್ನು ಘಟನಾ ಸ್ಥಳದಲ್ಲಿ ಮಾಡಲಿಲ್ಲ ಎಂದರೆ ಸರಿಯಲ್ಲ. ನಿಪಿ 6 ರಿಂದ 8 ನ್ನು ಪಂಚರ ಸಮಕ್ಷಮ ಮಾಡಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನಾವು ಬರೆದು ಹಾಜರುಪಡಿಸಿದ ಹೇಳಿಕೆಯನ್ನು ಸಾಕ್ಷಿ ನೀಡಲಿಲ್ಲ ಎಂದರೆ ಸರಿಯಲ್ಲ.

ನಿಪಿ16 ರಿಂದ 18ನ್ನು ನಾನು ಚಾಸಾ 6 ರವರಿಗೆ ನೀಡಲಿಲ್ಲ ಎಂದರೆ ಸರಿಯಲ್ಲ. ಚಾಸಾ 9 ನನ್ನ ಅಧೀನ ಸಿಬ್ಬಂದಿ ಎಂದರೆ ಸರಿ. ಅವರಿಗೆ ಯಾವುದೇ ಭಾವಚಿತ್ರವನ್ನು ತೆಗೆಯುವ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಪೂರಕವಾಗುವಂತೆ ಅವರಿಂದ 65 ಬಿ ಪ್ರಮಾಣ ಪತ್ರವನ್ನು ಹಾಗೂ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅವರು ಸದ್ರಿ ದಿನಾಂಕದಂದು ಎಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದಾರೆ ಎಂಬ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಈ ಬಗ್ಗೆ ನಮಗೆ ಅವಶ್ಯಕತೆ ಕಂಡು ಬಂದಿರುವುದಿಲ್ಲ ಎಂದು ಬನುಡಿಯುತ್ತಾರೆ. ಈ ಅಪಘಾತವು ಆರೋಪಿತನ ತಪ್ಪಿನಿಂದ ಆಗಲಿಲ್ಲ ಎಂದರೆ ಸರಿಯಲ್ಲ. ಈ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ವಿಷಯವು ತಿಳಿದಿದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣವು ನಾನೇ ದಾಖಲಿಸಿಕೊಂಡಿರುವುದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ